**Q.P. Code – 50130**

**ಪ್ರಥಮ ಬಿ.ಎ. ಪದವಿ ಪರೀಕ್ಷೆ**

**ಅಕ್ಟೋಬರ್/ನವೆಂಬರ್ 2014**

**(ಅಂಚೆ ಮತ್ತು ತೆರಪಿನ ಶಿಕ್ಷಣ)**

**ಬಸವ ತತ್ವ**

**(DAA 530) ಪತ್ರಿಕೆ 1 – ಬಸವ ತತ್ವ ಪ್ರದೀಪಿಕೆ**

**(ಹೊಸಬರಿಗೆ/ಹಳಬರಿಗೆ)**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

ವಿಭಾಗ – ಎ

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **2 × 5 = 10**

(ಅ) ಪಾಪ ಪುಣ್ಯ ಉಭಯ ಕರ್ಮವನಾರು ಬಲ್ಲರಯ್ಯಾ

ಇದ ನಂಬುವರಾರು?

ಕಾಯ ತಾನುಂಬುದೇ ಕಾಯ ಮಣ್ಣು

ಜೀವ ತಾನುಂಬುದೇ ಜೀವತಾ ಬಯಲು

ಈ ಉಭಯ ನಿರ್ಣಯ ಕೂಡಲ ಸಂಗನ ಶರಣರೇ ಬಲ್ಲರು

(ಆ) ಆದಿಯಲು ಬಯಲು ಅಂತ್ಯದಲ್ಲೂ ಬಯಲು

ಮಧ್ಯದಲ್ಲಿ ತೋರಿಕೆಡುವುದು ನೋಡಾ ಈ ಘಟವು

ಈ ಜಗದಲ್ಲಿ ಇದೇ ದೃಷ್ಟ ನೋಡಾ

ಕಪಿಲ ಸಿದ್ದ ಮಲ್ಲಿಕಾರ್ಜುನಾ

(ಇ) ಅಂತು ಜನ್ಮವಾದವರಿಲ್ಲ, ಸತ್ತು ಮತ್ತೆ ತೋರಿದವರಿಲ್ಲ

ದುರಭಿಮಾನವ ಹೊತ್ತು ಅಘಟಿತ ಘಟನೆಯನ್ನೇ ನುಡಿಯುವಿರಿ

ಈ ದೇಹವಿಡಿದು ನುಡಿವ ಪ್ರಪಂಚಿಗಳ ನೀನೇನೆಂಬೆ ಗುಹೇಶ್ವರಾ?

ವಿಭಾಗ – ಬಿ

2. ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 10 = 20**

(ಅ) ಬಸವ ಪೂರ್ವ ಸ್ಥಿತಿಯನ್ನು ವಿವರಿಸಿ.

(ಆ) ಬ್ರಹ್ಮಚರ್ಯದ ನಿಜವಾದ ಆಶಯಗಳೇನು? ಇಂದಿನ ಸಾಮಾಜಿಕ ಸಂದರ್ಭದೊಡನೆ ವಿವರಿಸಿ.

(ಇ) ಭಗವದ್ಗೀತೆಯ ಕರ್ಮಯೋಗಕ್ಕೂ ಬಸವಣ್ಣನವರ ಕಾಯಕ ಕಲ್ಪನೆಗೂ ವ್ಯತ್ಯಾಸಗಳಿವೆಯೆ? ಚರ್ಚಿಸಿ.

ವಿಭಾಗ – ಸಿ

ನಿಜಾಚರಣೆ

3. **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 5 = 10**

(ಅ) ಜವಳ ಇಳಿಸುವ ಕಾರ್ಯಕ್ರಮ

(ಆ) ನೂತನ ಕಟ್ಟಡ ಪ್ರವೇಶ ಸಮಾರಂಭ

(ಇ) ಸಮಾಜ ಸೇವಾ ದೀಕ್ಷೆ

ವಿಭಾಗ – ಡಿ

ವಿಶ್ವ ಧರ್ಮಗಳು ಮತ್ತು ಧರ್ಮಗಳ ಸಮನ್ವಯ

4. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **3 × 10 = 30**

(ಅ) ವೇದಗಳ ವಿಶ್ವಧರ್ಮ ಚಿಂತನೆಯನ್ನು ಕುರಿತು ಬರೆಯಿರಿ.

(ಆ) ಅಷ್ಟಾಂಗ ಯೋಗದ ವಿವಿಧ ಹಂತಗಳನ್ನು ವಿವರಿಸಿ.

(ಇ) ''ಅನುಭವ ಮಂಟಪ'' ಅಂದಿನ ಸಮಾಜದಲ್ಲಿ ಬೀರಿದ ಪರಿಣಾಮಗಳನ್ನು ಚರ್ಚಿಸಿ.

(ಈ) ಸೂಫಿ ಪಂಥದ ಆಶಯಗಳೇನು? ವಿವರಿಸಿ.

ವಿಭಾಗ – ಇ

5. ವಿಶೇಷ ಸೂಚನೆ : ಹೊಸಬರು **ಕಡ್ಡಾಯವಾಗಿ** ಬರೆಯಲೇಬೇಕು : **1 × 10 = 10**

(ಅ) ಸ್ವರ್ಗ ನರಕ ಕಲ್ಪನೆಯನ್ನು ಶರಣರು ವರ್ತಮಾನ ಕಾಲಕ್ಕೆ ಹೇಗೆ ಅನ್ವಯಿಸಿದ್ದಾರೆ? ವಿವರಿಸಿ.

---